ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 3, Nov-Dec, 2022, Pp. 148-156.
©*IIMRD*, Mysuru.
IIMRD JOURNALS
www.iimrd.com

# ಸೊಫೋಕ್ಲಿಸ್ ಮಹಾಕವಿಯ ದೊರೆ ಈಡಿಪಸ್: ಮನುಷ್ಯ ಶೋಧದ ಜಯ

**ಡಾ. ಕೆ. ಶಿವಾನಂದಯ್ಯ***
*ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ.

***ಸಾರಾಂಶ: (Abstract)***

ಸೊಫೋಕ್ಲಿಸ್ ಜಗತ್ತಿನ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬ. ಈತನ 'ದೊರೆ ಈಡಿಪಸ್' ವಿಶ್ವದ ಅತ್ಯುತ್ತಮ ನಾಟಕಗಳಲ್ಲಿ ಒಂದೆನಿಸಿದೆ. ಮನುಷ್ಯ ಶೋಧದ ವಿಜಯದ ಕಥೆಯನ್ನೂ, ದುರಂತವನ್ನೂ ಒಟ್ಟೊಟ್ಟಿಗೆ ಅನುಭವಕ್ಕೆ ತಂದು ಕೊಡುವ ರೀತಿ ಅನನ್ಯವಾದುದು. ಸಾರ್ವಕಾಲಿಕ ಸಂಕೇತದಂತಿರುವ ಈಡಿಪಸ್ ಪಾತ್ರದ ಮೂಲಕ ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿಪಾದಿಸುವ ನಾಟಕ ಪ್ರಸ್ತುತವೆನಿಸುತ್ತದೆ. ಯಾರಿಂದಲೂ ಸಾಧಿಸಲಾರದ್ದನ್ನು ಸಾಧಿಸಿ ಅತಿ ಎತ್ತರಕ್ಕೇರಿದ ವ್ಯಕ್ತಿ ಇದ್ದಕ್ಕಿದ್ದಂತೆ ಊಹಿಸಲಾರದ ಪ್ರಪಾತಕ್ಕೆ ಬೀಳುವ ದುರಂತವನ್ನು ಆ ಮೂಲಕ ದೈವ ಶಕ್ತಿಯ ಎದುರು ಮನುಷ್ಯ ತೃಣ ಸಮಾನ ಎಂಬುದನ್ನು ನಾಟಕ ಪ್ರತಿಪಾದಿಸಿರುವುದನ್ನು ಕಂಡುಕೊಳ್ಳಲು ಪ್ರಯತ್ನಿಸಿದೆ.

***ಮುಖ್ಯಪದಗಳು: (Keywords)*** ಸೊಫೋಕ್ಲಿಸ್, ದೊರೆ ಈಡಿಪಸ್, ಕ್ರೆಯಾನ್, ಟೈರೀಸಿಯಸ್, ಥೀಬ್ಸ್.

**ಪೀಠಿಕೆ**

ಮಹಾಕವಿ ಸೊಫೋಕ್ಲಿಸ್ ಪ್ರಮುಖ ಗ್ರೀಕ್ ನಾಟಕಕಾರರಲ್ಲಿ ಒಬ್ಬನು. ಈತ ಹುಟ್ಟಿದ್ದು ಕ್ರಿ.ಪೂ.496 ಅಥೆನ್ಸ್ ಪಟ್ಟಣದಾಚೆಯ ಕಲೋನಸ್ ಎಂಬ ಹಳ್ಳಿಯಲ್ಲಿ. ಶ್ರೀಮಂತ ಮನೆತನದಲ್ಲಿ ಜನಿಸಿದ ಈತನಿಗೆ ಉತ್ತಮ ಶಿಕ್ಷಣ ದೊರೆಯಿತು. ತನ್ನ ಇಪ್ಪತ್ತೇಳನೆಯ ವಯಸ್ಸಿನಲ್ಲೇ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಮೊದಲ ಬಹುಮಾನ ಪಡೆದನು. ಅದೇ ಸ್ಪರ್ಧೆಯಲ್ಲಿ ಇವನಿಗಿಂದ ಮೂವತ್ತು ವರ್ಷ ಹಿರಿಯವನಾದ ಈಸ್ಕಿಲಸ್ ಎರಡನೆಯ ಬಹುಮಾನ ಪಡೆದನು. ಸೊಫೋಕ್ಲಿಸ್ ಅಥೇನಿಯನ್ ಸಾಮ್ರಾಜ್ಯದ ಆಡಳಿತದಲ್ಲಿ ತುಂಬಾ ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸಿದನು. ಸ್ಥಿತಪ್ರಜ್ಞನೂ, ಶಾಂತ ಸ್ವಭಾವವುಳ್ಳವನೂ ಆದ ಸೊಫೋಕ್ಲಿಸ್ ಪರಂಪರಾಗತ ರೂಢಿ, ನಂಬಿಕೆಗಳಲ್ಲಿ ಆಸ್ಥೆ ಹೊಂದಿದ್ದನು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಸೊಫೋಕ್ಲಿಸ್ ಒಂದು ನೂರಕ್ಕೂ ಹೆಚ್ಚು ನಾಟಕ ರಚಿಸಿರುವುದಾಗಿ ತಿಳಿದು ಬರುತ್ತದೆಯಾದರೂ ಏಳು ನಾಟಕಗಳು ಮಾತ್ರ ದೊರೆತಿವೆ. ಅವೆಂದರೆ; ದೊರೆ ಈಡಿಪಸ್, ಕೊಲೋನಸ್ ನಲ್ಲಿ ಈಡಿಪಸ್, ಅಂತಿಗೊನೆ, ಎಲೆಕ್ಟ್ರಾ, ಟ್ರಾಶಿನೇ ಮತ್ತು ಫಿಲೊಕ್ಟಿಟಿಸ್. ಸೊಫೋಕ್ಲಿಸ್ ತನ್ನ ತೊಂಬತ್ತನೆಯ ವಯಸ್ಸಿನಲ್ಲಿ ಅಂದರೆ ಕ್ರಿ.ಪೂ.406ರಲ್ಲಿ ಮರಣ ಹೊಂದಿದನು.

*Please cite this article as: ಡಾ. ಕೆ. ಶಿವಾನಂದಯ್ಯ*. (2022). ಸೊಫೋಕ್ಲಿಸ್ ಮಹಾಕವಿಯ ದೊರೆ ಈಡಿಪಸ್: ಮನುಷ್ಯ ಶೋಧದ ಜಯ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 148–156.*

ಸೊಫೋಕ್ಲಿಸ್ ಮಹಾಕವಿಯ 'ದೊರೆ ಈಡಿಪಸ್' ನಾಟಕವನ್ನು ಪಿ.ಲಂಕೇಶ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಕತೆ, ಕವನ, ಕಾದಂಬರಿ, ನಾಟಕ, ವಿಮರ್ಶೆ, ಅಂಕಣ ಬರಹ, ಅನುವಾದಗಳ ಮೂಲಕ ಕನ್ನಡದ ಮಹತ್ವದ ಲೇಖಕರೆನಿಸಿದ್ದಾರೆ. ನಿಸ್ತೇಜಗೊಂಡಿದ್ದ ಕನ್ನಡ ರಂಗಭೂಮಿಯನ್ನು ಪುನಶ್ಚೇತನಗೊಳಿಸಿದವರಲ್ಲಿ ಲಂಕೇಶ್ ಒಬ್ಬರು. ಲಂಕೇಶರ ನಾಟಕಗಳ ಮುಖ್ಯ ಸ್ಥಾಯಿ ಅಸ್ವಸ್ಥತೆ. ಇದನ್ನು ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ನೆಲೆಗಳಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದಾರೆ. 'ದೊರೆ ಈಡಿಪಸ್' ನಾಟಕವನ್ನು ಈ ಮೊದಲು ಕ.ವೆಂ.ರಾಘವಾಚಾರ್ ಅವರು ಅನುವಾದಿಸಿದ್ದರು.

ಸ್ವತಃ ಗ್ರೀಕ್ ಭಾಷಾ ಪಂಡಿತರಾಗಿದ್ದ ಅವರು ಹಳೆಗನ್ನಡ ಶೈಲಿಯಲ್ಲಿ ಭಾಷಾಂತರಿಸಿದ್ದರಿಂದ ಕ್ಲಿಷ್ಟವೆನಿಸಿತ್ತು. ಆದರೆ ಲಂಕೇಶರು ಆಡುಮಾತಿನ ಶೈಲಿಯಲ್ಲಿ ಅನುವಾದಿಸಿದ್ದಾರೆ. ಈ ನಾಟಕ ರಂಗ ಪ್ರದರ್ಶನಕ್ಕಾಗಿಯೇ ರಚಿಸಿದ್ದೆಂದು ಲಂಕೇಶ್ ಹೇಳುತ್ತಾರೆ. ನಾಟಕ ಪ್ರಕಟವಾಗುವ ಮೊದಲೇ ಯಶಸ್ವಿ ರಂಗ ಪ್ರಯೋಗವಾದದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 'ಗ್ರೀಕ್ ನಾಟಕದ ಮಟ್ಟಿಗಂತೂ ಕರಾರುವಾಕ್ಕಾಗಿ ಮೂಲದ ಅರ್ಥಕ್ಕೆ ಮಾತ್ರ ಪ್ರಾಮಾಣಿಕವಾಗಿರಬಲ್ಲ ಅನುವಾದ ಅನುವಾದವೇ ಅಲ್ಲ. ಯಾಕೆಂದರೆ ಈ ನಾಟಕದ ಲಯ, ರೂಪವೇ ಅದರ ಸ್ವಾರಸ್ಯ ಮತ್ತು ಅರ್ಥವಂತಿಕೆ ಎರಡೂ ಆಗಿರುತ್ತವೆ. ಅವನ್ನು ಹಿಡಿಯಬಲ್ಲವ ಮಾತ್ರ ಗ್ರೀಕ್ ನಾಟಕದ ಹೇಳಿಕೆಗೆ ಕಿವಿ ಗೊಟ್ಟಿದ್ದಾನೆ ಮತ್ತು ಕೇಳುವಂತೆ ಮಾಡುತ್ತಾನೆ'[1] ಎನ್ನುವ ಲಂಕೇಶ್ ಗ್ರೀಕ್ ರಂಗಭೂಮಿ ಮತ್ತು ಗ್ರೀಕ್ ದುರಂತ ನಾಟಕಗಳಲ್ಲಿನ ಭಾಷಣ ಶೈಲಿಯನ್ನು ಸರಿಯಾಗಿ ಗ್ರಹಿಸಿದ್ದಾರೆ. ಆದುದರಿಂದ ಕನ್ನಡ ಅನುವಾದ ನಾಟಕಗಳಲ್ಲಿ ಲಂಕೇಶ್ ಅವರ 'ದೊರೆ ಈಡಿಪಸ್' ಮತ್ತು ಅಂತಿಗೊನೆ ನಾಟಕಗಳಿಗೆ ಮಹತ್ವದ ಸ್ಥಾನವಿದೆ.

'ದೊರೆ ಈಡಿಪಸ್' ನಾಟಕವು ಥೀಬ್ಸ್ ಪುರಾಣ ಕಥೆಯನ್ನಾಧರಿಸಿದೆ. ಥೀಬ್ಸ್ ಪುರಾಣದಂತೆ ಥೀಬ್ಸ್ ನಗರವನ್ನು ಡೆಲ್ಫಿಯ ದೇವವಾಣಿ ಆಜ್ಞೆ ಮೇರೆಗೆ ಕ್ಯಾಡಮಸ್ ಎಂಬಾತ ಸ್ಥಾಪಿಸಿದನು. ಥೀಬ್ಸ್ ನಗರದ ಸ್ಥಾಪಕ ಕ್ಯಾಡಮಸ್‌ನ ಮಗ ಪಾಲಿಡೋರಸ್. ಅವನ ಮಗ ಲ್ಯಾಬ್ಡಾಕಸ್. ಅವನ ಮಗ ಲಾಯಿಸ್. ಲಾಯಿಸ್‌ನ ಹೆಂಡತಿ ಯೊಕಾಸ್ತಾ. ಈ ದಂಪತಿಗಳಿಗೆ ಮಕ್ಕಳು ಇಲ್ಲದ್ದರಿಂದ ದೇವವಾಣಿಯ ಮೊರೆ ಹೋಗುತ್ತಾರೆ. ಆಗ ದೇವವಾಣಿಯು ಲಾಯಿಸ್‌ಗೆ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗುವ ಗಂಡು ಮಗು ಜನಿಸುವುದೆಂದು ಹೇಳುತ್ತದೆ. ಆನಂತರದ ಕೆಲವು ದಿನಗಳಲ್ಲಿ ಲಾಯಿಸ್ ಮತ್ತು ಯೊಕಾಸ್ತಾ ದಂಪತಿಗಳಿಗೆ ಗಂಡು ಮಗು ಜನಿಸುತ್ತದೆ.

ದೇವವಾಣಿಯ ಭವಿಷ್ಯಕ್ಕೆ ಹೆದರಿದ ಲಾಯಿಸ್ ಮಗುವನ್ನು ತನ್ನ ಸೇವಕನಿಗೆ ಕೊಲ್ಲುವಂತೆ ಹೇಳಿ ಕೊಡುತ್ತಾನೆ. ಮಗುವನ್ನು ಕೊಂಡೊಯ್ದ ಸೇವಕ ಅದರ ಅಂಗಾಲಿಗೆ ಸೂಜಿ ಚುಚ್ಚಿ ತೆವಳಲೂ ಬಾರದಂತೆ ಮಾಡುತ್ತಾನೆ. ಕೊನೆಗೆ ಆ ಮಗುವಿನ ಬಗ್ಗೆ ಕರುಣೆ ಹುಟ್ಟಿ ಅಲ್ಲಿಯೇ ಇದ್ದ ಕಾರಿಂಥ್ ದೇಶದ ಕುರುಬನೊಬ್ಬನಿಗೆ ಆ ಮಗುವನ್ನು ಸಾಕಿಕೊಳ್ಳುವಂತೆ ಹೇಳಿ ಕೊಟ್ಟು ಥೀಬ್ಸ್ ನಗರಕ್ಕೆ ಮರಳುತ್ತಾನೆ. ಹೀಗೆ ಕಾಲು ಚುಚ್ಚಿಸಿಕೊಂಡ ಮಗುವೇ ಈಡಿಪಸ್. ಕಾರಿಂಥಿನ ಕುರುಬ ಆ ಮಗವನ್ನು ತನ್ನ ದೊರೆ ಪಾಲಿಬಸ್‌ಗೆ ಕೊಡುತ್ತಾನೆ. ಕಾರಿಂಥ್ ದೊರೆ ಪಾಲಿಬಸ್‌ಗೆ ಕೂಡ ಮಕ್ಕಳಿರಲಿಲ್ಲವಾದ್ದರಿಂದ ಸಹಜವಾಗಿಯೇ ಈಡಿಪಸ್‌ನನ್ನು ಅತ್ಯಂತ ಪ್ರೀತಿಯಿಂದ ಬೆಳೆಸಿದನು. ಈಡಿಪಸ್ ಬೆಳೆದು ದೊಡ್ಡವನಾಗುತ್ತಾನೆ. ಹಬ್ಬದ ದಿನದಂದು ಕುಡುಕನೊಬ್ಬನಿಂದ ಈಡಿಪಸ್ ತನ್ನ ಭವಿಷ್ಯವಾಣಿಯನ್ನು ತಿಳಿಯುತ್ತಾನೆ. ಪಿತೃಹತ್ಯೆಗೆ ಹೆದರಿದ ಈಡಿಪಸ್

ಪಾಲಿಬಸ್ ನಿಂದ ದೂರಕ್ಕೆ ಓಡಿ ಹೋಗುತ್ತಾನೆ. ಹೀಗೆ ಹಲವು ದಿನ ಸಂಚರಿಸಿ ಥೀಬ್ಸ್ ನಗರದೆಡೆಗೆ ಬರುತ್ತಿರುವಾಗ ಮೂರು ದಾರಿಗಳು ಸೇರುವೆಡೆ ಥೀಬ್ಸ್‌ನ ದೊರೆ ಲಾಯಿಸ್ ನೊಡನೆ ಜಗಳವಾಡುವ ಪ್ರಸಂಗ ಬರುತ್ತದೆ. ಆಗ ಅವನು ಯಾರೆಂದು ತಿಳಿಯದೆ ಈಡಿಪಸ್ ದೊರೆ ಲಾಯಿಸ್ ನನ್ನು ಕೊಂದು ಥೀಬ್ಸ್ ನಗರ ಪ್ರವೇಶಿಸುತ್ತಾನೆ. ದೊರೆಯನ್ನು ಕಳೆದುಕೊಂಡು ಥೀಬ್ಸ್ ನಗರ ಗೋಳಿಡುತ್ತಿದೆ. ಅಲ್ಲಿನ ಸ್ಫಿಂಕ್ಸ್ ಮಾರಿ ಜನರಿಗೆ ಒಗಟುಗಳನ್ನು ಒಡ್ಡಿ, ಒಗಟು ಬಿಡಿಸಲಾರದವರನ್ನು ಕೊಲ್ಲುತ್ತಿದ್ದಳು. ಆಗ ಈಡಿಪಸ್ ಮಾರಿಯ ಒಗಟುಗಳನ್ನು ಬಿಡಿಸಿ ಥೀಬ್ಸ್ ನಗರವನ್ನು ಮಾರಿಯಿಂದ ಬಿಡುಗಡೆಗೊಳಿಸುತ್ತಾನೆ. ಜನ ಮೆಚ್ಚುಗೆಗೆ ಪಾತ್ರನಾದ ಈಡಿಪಸ್ ಥೀಬ್ಸ್ ನ ದೊರೆಯಾಗುತ್ತಾನೆ. ಲಾಯಿಸ್‌ನ ಹೆಂಡತಿ ಯೊಕಾಸ್ತಾಳನ್ನು ಮದುವೆಯಾಗುತ್ತಾನೆ. ಹೀಗೆ ಈಡಿಪಸ್ ಕುರಿತ ಭವಿಷ್ಯವಾಣಿ ನಿಜವಾಗುತ್ತದೆ.

ಈಡಿಪಸ್ ತನ್ನ ಕುರಿತ ಭವಿಷ್ಯವಾಣಿ ನಿಜವಾದುದನ್ನು ಕಂಡು, ಪ್ರಾಯಶ್ಚಿತ್ತಕ್ಕಾಗಿ ತನ್ನೆರಡು ಕಣ್ಣುಗಳನ್ನು ಕಳೆದುಕೊಂಡು ದೇಶದಿಂದ ಉಚ್ಚಾಟಿಸಿ ಎಂದು ಕೇಳಿಕೊಳ್ಳುವುದು 'ದೊರೆ ಈಡಿಪಸ್' ನಾಟಕದ ವಸ್ತು. 'ದೊರೆ ಈಡಿಪಸ್' ಜಗತ್ತಿನ ಶ್ರೇಷ್ಠ ನಾಟಕಗಳಲ್ಲಿ ಒಂದೆನಿಸಿದೆ. ಇದನ್ನು 'ಈಡಿಪಸ್ ಟೆರೆನಸ್', 'ಈಡಿಪಸ್ ರೆಕ್ಸ್' ಎಂಬ ಹೆಸರುಗಳಿಂದಲೂ ಕರೆಯಲಾಗುತ್ತದೆ. 'ದೊರೆ ಈಡಿಪಸ್' ನಾಟಕ ಪ್ರಾರಂಭವಾಗುವುದು ಈಡಿಪಸ್ ಥೀಬ್ಸ್ ನ ದೊರೆಯಾಗಿ ಹದಿನೈದು ವರ್ಷಗಳು ಕಳೆದ ನಂತರದಲ್ಲಿ. ಅಂದರೆ ಅಷ್ಟರಲ್ಲಿ ಈಡಿಪಸ್ ತಂದೆಯನ್ನು ಕೊಂದು, ತಾಯಿಯನ್ನು ಮದುವೆಯಾಗಿ, ಮಕ್ಕಳನ್ನು ಪಡೆದಿದ್ದಾನೆ. ದೇವತೆಗಳು ಥೀಬ್ಸ್ ನಗರಕ್ಕೆ ಮಾರಣಾಂತಿಕ ಕಾಯಿಲೆ ಮತ್ತು ಕ್ಷಾಮವನ್ನು ಕಳುಹಿಸಿದ್ದಾನೆ. ಥೀಬ್ಸ್ ನಗರದ ಎಲ್ಲೆಡೆ ಮಾರಣಾಂತಿಕ ಕಾಯಿಲೆ ಮತ್ತು ಕ್ಷಾಮ ಆವರಿಸಿದೆ. ಎಲ್ಲೆಲ್ಲೂ ಸಾವು, ನೋವು, ನರಳಾಟ ಕೇಳಿಬರುತ್ತಿದೆ. ಭಯಭೀತರಾದ ಅಸಂಖ್ಯ ನಾಗರಿಕರು ಅರಮನೆಯ ಮುಂಭಾಗದ ಮೆಟ್ಟಿಲುಗಳ ಮೇಲೆ, ದೇವ ಪೀಠದ ಸುತ್ತ ನಮಸ್ಕರಿಸುತ್ತಾ, ಶಿರಬಾಗಿ ನೆರೆದಿದ್ದಾರೆ.

ದೊರೆ ಈಡಿಪಸ್ ಪ್ರವೇಶಿಸುತ್ತಾನೆ. ಜನರ ಪ್ರಾರ್ಥನೆಯ ಕಾರಣ ತಿಳಿಯಲು ವೃದ್ಧ ಅರ್ಚಕನನ್ನು ಕರೆಸುತ್ತಾನೆ. ಸ್ಯೂಸನ ಅರ್ಚಕ ಥೀಬ್ಸ್ ನಗರವನ್ನು ಆವರಿಸಿರುವ ಘೋರವಾದ ಕಾಯಿಲೆ ಜನರನ್ನು ಬಲಿ ತೆಗೆದುಕೊಳ್ಳುತ್ತಿದ್ದು, ನೀನು ದೇವರ ಸಮ ಎಂದಲ್ಲ, ಪ್ರಥಮ ಪ್ರಜೆಯಾಗಿ ದೇವರ ನೆರವಿನಿಂದ ನಮ್ಮನ್ನು ಪಾರು ಮಾಡಬಹುದೆಂದು ನೆರೆದಿದ್ದಾರೆ ಎಂದು ವಿವರಿಸುತ್ತಾನೆ. ಈಡಿಪಸ್ ಜನರ ಸಂಕಟ ತನ್ನ ಸಂಕಟ ಎಂದು ತಿಳಿದು ಯೊಕಾಸ್ತಳ ಸಹೋದರ ಕ್ರೆಯಾನ್ ನನ್ನು ದೇವರ ಮಾರ್ಗದರ್ಶನಕ್ಕಾಗಿ ದೇವಾಲಯಕ್ಕೆ ಕಳುಹಿಸಿರುವುದಾಗಿ ಹೇಳುತ್ತಾನೆ. ಅಷ್ಟೊತ್ತಿಗೆ ಕ್ರೆಯಾನ್ ಡೆಲ್ಫಿಯ ದೇವವಾಣಿಯೊಂದಿಗೆ ಆಗಮಿಸಿ ಹೀಗೆ ಹೇಳುತ್ತಾನೆ:

***ಸ್ಪಷ್ಟ ಮಾತುಗಳಲ್ಲಿ ದೇವರು ನುಡಿದಿದ್ದಾನೆ:***

***ಈ ಥೀಬ್ಸ್ ನಗರ ಪಾಪಕೃತ್ಯವೊಂದನ್ನು ಬಚ್ಚಿಟ್ಟುಕೊಂಡಿದೆ;***

***ಗುಣವಾಗದ ಕಾಯಿಲೆ ಅದು;***

***ಅದನ್ನು ಬೇರೊರಸೆ ಕಿತ್ತೊಗೆಯದಿದ್ದರೆ ಇಡೀ ನಗರ ಹಾಳಾಗುತ್ತದೆ.***[2]

ಅಲ್ಲದೆ, ಕೊಲೆಯಿಂದ ಅಂಟಿಕೊಂಡ ಪಾಪವನ್ನು ರಕ್ತಕ್ಕೆ ರಕ್ತ ತೆತ್ತಾದರೂ ನಿವಾರಿಸಬೇಕು. ಥೀಬ್ಸ್ ದೊರೆ ಲಾಯಿಸ್ ನನ್ನು ಕೊಂದ ಪಾಪಿಯನ್ನು ದೇಶಾಂತರಗೊಳಿಸಬೇಕು ಎನ್ನುತ್ತಾನೆ. ಕೊಲೆಗಡುಕನನ್ನು ಪತ್ತೆ ಹಚ್ಚುವ ಧೈರ್ಯಶಾಲಿ ನಮಗೆ ದೊರೆಯಲಿಲ್ಲ. ಸ್ಫಿಂಕ್ಸ್ ದೇವತೆಯ ದ್ವಂದ್ವಾರ್ಥದ ಕೂಗಿನಲ್ಲಿ ಎಲ್ಲವೂ ಮುಳುಗಿ ಹೋಯಿತು. ಅವಳ ನಿಗೂಢಾರ್ಥ ಹುಡುಕುತ್ತ ಕೊಲೆಯ ನಿಗೂಢತೆ ಮರೆತು ಹೋಯಿತು ಎನ್ನುತ್ತಾನೆ. ಅದಕ್ಕೆ ಈಡಿಪಸ್;

ದೇವರ ದಯೆಯಿಂದಲೇ ನಮ್ಮ ಉದ್ಧಾರ– ಇಲ್ಲವೆ ಸಂಪೂರ್ಣನಾಶ[3] ಎನ್ನುತ್ತಾ ಅರಮನೆಯೊಳಗೆ ಹೋಗುತ್ತಾನೆ. ಆಗ ಥೀಬ್ಸ್ ನಗರ ಪ್ರವೇಶಿಸಿದ ಮೇಳದವರು ಥೀಬ್ಸ್ ನಗರವನ್ನು ಆವರಿಸಿರುವ ಸಂಕಟ, ಹತಾಶೆಯನ್ನು ವರ್ಣಿಸುತ್ತಾ, ಮಹಾ ಪಿಡುಗಿನಿಂದ ಪಾರುಮಾಡುವಂತೆ ದೇವತೆಗಳಿಗೆ ಮೊರೆ ಇಡುತ್ತಾರೆ.

***ಮಾತು ಮೀರಿದ ಶೋಕ***

***ಮದ್ದು ಅರಿಯದ ರೋಗ***

***ಬುವಿಯ ಬೀಳುಗೊಳಿಸುವ ಜಾಡ್ಯ,***

***ಬಂಜೆ ನೋವಿನ ಬೇನೆ***

***ಜೀವ ಜೀವದ ಹಿಂದೆ ಬೆಂಕಿಯ ತೊರೆದು***

***ಹಾರುತ್ತಿದೆ ಘೋರ ಕತ್ತಲಿಗೆ*** [4]

ಅರಮನೆಯಿಂದ ಮತ್ತೆ ಪ್ರವೇಶಿಸಿದ ಈಡಿಪಸ್ ಲಾಯಿಸ್ ನನ್ನು ಕೊಂದವರಿದ್ದರೆ ಒಪ್ಪಿಕೊಳ್ಳಿ, ವಿದೇಶದವನು ಕೊಂದಿದ್ದರೂ ತಿಳಿಸಿ ಬಹುಮಾನ ಕೊಡುತ್ತೇನೆ ಎಂದು ಘೋಷಿಸುತ್ತಾನೆ. ಯಾರಾದರೂ ಭಯದಿಂದ ತನ್ನ ಅಥವಾ ಮತ್ತೋರ್ವನ ಈ ಪಾಪಕೃತ್ಯವನ್ನು ಮುಚ್ಚಿಟ್ಟರೆ ಅವನೊಡನೆ ಯಾರೂ ಸಂಪರ್ಕದಲ್ಲಿರಬಾರದು. ಅವನು ಸಾಯುವವರೆಗೂ ಅಪಮಾನದ ಹೊರೆಯನ್ನು ಹೊತ್ತು ಅಲೆಯಲಿ, ಈ ಶಾಪಕ್ಕೆ ನಾನೂ ಕೂಡ ಹೊರತಲ್ಲ ಎಂದು ಈಡಿಪಸ್ ಸಾರುತ್ತಾನೆ. ಅಷ್ಟೊತ್ತಿಗೆ ಕ್ರೆಯಾನ್ ನ ಸಲಹೆಯಂತೆ ಕುರುಡ ಭವಿಷ್ಯಕಾರ ಟೈರೀಸಿಯಸ್ ಆಗಮಿಸುತ್ತಾನೆ.

ಥೀಬ್ಸ್‌ನ ಅರಮನೆಯ ಮುಂಭಾಗದ ದೃಶ್ಯ. ಅಸಂಖ್ಯ ನಾಗರಿಕರು ನೆರೆದಿದ್ದಾರೆ. ಈಡಿಪಸ್, ಅರ್ಚಕ, ಮೇಳದವರು ಮಾತನಾಡುತ್ತಿರುವಾಗ ಟೈರೀಸಿಯಸ್ ಪ್ರವೇಶಿಸುತ್ತಾನೆ. ಆರಂಭದಲ್ಲಿ ಈಡಿಪಸ್ ವಿನಯದಿಂದಲೇ ಟೈರೀಸಿಯಸ್ ನನ್ನು ಮಾತನಾಡಿಸುತ್ತಾನೆ. "ಟೈರೀಸಿಯಸ್ ದಾರ್ಶನಿಕ; ಎಲ್ಲ ಗೂಢಗಳ ಭೇದಕ; ಕಲಿತ ಎಲ್ಲದರ, ಒಳಿತು ಕೆಡುಕೆಲ್ಲದರ ಭೂಮಿ ಸ್ವರ್ಗದ ಎಲ್ಲ ಅವರ್ಣನೀಯ ಗೋಪ್ಯಗಳ ಅರಿತ ಭವಿಷ್ಯಕಾರ.... ಈ ನಗರದ ಯಾತನೆ; ಈ ವ್ಯಾಧಿಯಿಂದ ನೀನು ಮಾತ್ರ ನಮ್ಮನ್ನು ರಕ್ಷಿಸಬಲ್ಲೆಯೆಂದು ನಾನು ಬಲ್ಲೆ"[5] ಎಂದೆಲ್ಲಾ ಹೇಳುತ್ತಾನೆ. ಆದರೆ ಟೈರೀಸಿಯಸ್ 'ಯಾಕಾದರೂ ಇಲ್ಲಿಗೆ ಬಂದೆ' ನಿನ್ನ ಕರ್ಮ ನೀನು ಅನುಭವಿಸು; ನನ್ನದನ್ನು ನಾನು ಬದುಕುತ್ತೇನೆ'[6] ಎಂದಾಗ ಕೋಪಗೊಂಡ ಈಡಿಪಸ್ ಟೈರೀಸಿಯಸ್ ಈ ಕೊಲೆ ಮಾಡಿಸಿರಬೇಕು ಎನ್ನುತ್ತಾನೆ. ಇದರಿಂದ ಕ್ರುದ್ಧಗೊಂಡ ತ್ರಿಕಾಲಜ್ಞಾನಿಯಾದ ಟೈರೀಸಿಯಸ್ "ಈ ದೇಶದ ಸೂತಕಕ್ಕೆ ನೀನೇ ಕಾರಣ, ನೀನು ಹುಡುಕುತ್ತಿರುವ ಕೊಲೆಪಾತಕಿ ನೀನೇ. ನಿನಗೆ ಪ್ರಿಯರಾದವರೊಂದಿಗೆ ನಾಚಿಕೆಬಿಟ್ಟು ಬದುಕುತ್ತಿದ್ದೀ. ನಿನ್ನ ಪಾಪ ನಿನಗೆ ಗೋಚರಿಸುತ್ತಿಲ್ಲ"[7] ಎನ್ನುತ್ತಾನೆ.

ಈಡಿಪಸ್ ಮತ್ತಷ್ಟು ಕೋಪದಿಂದ ಕುದಿಯುತ್ತಾನೆ. "ಕಣ್ಣಿಲ್ಲದ, ಬುದ್ಧಿ ಇಲ್ಲದ ಅರುಳು ಮರುಳ, ಕೊನೆಯಿಲ್ಲದ ಕತ್ತಲಲ್ಲಿರುವ ಮುದುಕ! ಇಂಥ ಮಾತುಗಳಿಂದ ನನ್ನನ್ನಾಗಲಿ ಕಣ್ಣುಳ್ಳ ಯಾವನನ್ನಾಗಲೀ ಅಲುಗಿಸಲಾರೆ"[8] ಎನ್ನುತ್ತಾನೆ. ಈಡಿಪಸ್ ಗೆ ಇದು ಕ್ರೆಯಾನ್ ನ ಪಿತೂರಿ ಇರಬಹುದು ಎನಿಸುತ್ತದೆ. ಕ್ರೆಯಾನ್ ಅಧಿಕಾರಕ್ಕಾಗಿ ಟೈರೀಸಿಯಸ್‌ನಿಂದ ಈ ಮಾತನ್ನು ಹೇಳಿಸಿದ್ದಾನೆ ಎನ್ನುತ್ತಾನೆ. ಆಗ ಟೈರೀಸಿಯಸ್ ಹೀಗೆ ಹೇಳುತ್ತಾನೆ:

*"ನಿತ್ಯವೂ ನೀನು ಹುಡುಕುತ್ತಿರುವ ಮನುಷ್ಯ, ಕೊಲೆಪಾತಕಿ,*
*ಲಾಯಿಸ್ ದೊರೆಯನ್ನು ಕೊಂದಾತ ಥೀಬ್ಸ್ ನಲ್ಲೆ ಇದ್ದಾನೆ.*
*ಆತ ಬೇರೆ ದೇಶದಲ್ಲೆಲ್ಲೊ ಹುಟ್ಟಿದಾತ ಅಂದುಕೊಂಡಿದ್ದೀ–*
*ಆದರೆ ಆತ ಇಲ್ಲೇ ಜನಿಸಿದವನೆಂದು ನಿನಗೆ ಗೊತ್ತಾಗುತ್ತದೆ;*
*ಸತ್ಯ ನಿನಗೆ ತಿಳಿಯುತ್ತದೆ.*
*ಆತನೊಬ್ಬ ಕುರುಡ,*
*ಆದರೀಗ ಅವನಿಗೆ ಕಣ್ಣಿದೆ; ಚಿಕ್ಕಾಸಿಲ್ಲದ ದರಿದ್ರ ಆತ,*
*ಆದರೀಗ ಶ್ರೀಮಂತ; ಆತ ಸದ್ಯದಲ್ಲೇ ಕುರುಡನಾಗಿ*
*ತನ್ನ ಕೋಲಿನಿಂದ ನೆಲ ಕುಟ್ಟುತ್ತ*
*ನಡೆಯಲಿದ್ದಾನೆ. ಈಗಿನ ಅವನ ಮಕ್ಕಳು ಅವನ*
*ಸೋದರರೆಂಬುದು ಅವನಿಗೆ ತಿಳಿಯುತ್ತದೆ; ಅವನ*
*ಜೊತೆಗಾತಿ ಆತನ ತಾಯಿ ಮತ್ತು ಪತ್ನಿ.*
*ಆತನ ತಂದೆಯ ಹಾಸಿಗೆ ನೆನೆಸಿದ ಹೆಂಗಸು ಈಗ ಹೆಂಡತಿ.*
*ಸಾಕು. ಹೋಗು, ಇದನ್ನು ಮನದಲ್ಲಿ ಮಥಿಸು;*
*ಬಳಿಕ, ನನ್ನ ಮಾತು ನಿನ್ನ ಪಾಲಿಗೆ ಸುಳ್ಳಾದರೆ*

*ನಾನೊಬ್ಬ ಖೊಟ್ಟಿ ಭವಿಷ್ಯಕಾರ ಎಂದು ತಿಳಿದುಕೋ.*[9] – ಎಂದು ಗಟ್ಟಿಯಾಗಿ ಕೂಗಿ ಅಲ್ಲಿಂದ ತೆರಳುತ್ತಾನೆ.

ಆಗ ಕ್ರೆಯಾನ್ ಪ್ರವೇಶಿಸುತ್ತಾನೆ. ಈಡಿಪಸ್ ಮತ್ತು ಕ್ರೆಯಾನ್ ನಡುವೆ ಮಾತಿನ ಸಮರ ಹೆಚ್ಚಾಗಿ ತಾರಕಕ್ಕೇರುತ್ತದೆ. ಪರಿಸ್ಥಿತಿಯ ಸೂಕ್ಷ್ಮವನ್ನು ಅರಿತ ಯೊಕಾಸ್ತಾ ಕ್ರೆಯಾನ್ ನನ್ನು ಅಲ್ಲಿಂದ ಕಳುಹಿಸಿ, ಈಡಿಪಸ್ ನೊಂದಿಗೆ ಅರಮನೆಯೊಳಗೆ ತೆರಳುತ್ತಾಳೆ. ಯೊಕಾಸ್ತಾ ಈಡಿಪಸ್ ನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾಳೆ. ಅವನ ಬಾಯಿಂದಲೇ ಕ್ರೆಯಾನ್ ಮೇಲಿನ ದ್ವೇಷಕ್ಕೆ ಕಾರಣ ಮತ್ತು ಟೈರೀಸಿಯಸ್ ಆಡಿದ ಮಾತುಗಳೆಲ್ಲವನ್ನೂ ಒಂದೊಂದಾಗಿ ಹೇಳಿಸುತ್ತಾ ಹೋಗುತ್ತಾಳೆ. 'ಹೇಳುತ್ತಾ ಹೋಗು ಎಲ್ಲಾ ಸ್ಪಷ್ಟವಾಗಲಿ ಎನ್ನುತ್ತಾಳೆ. ಇವರಿಬ್ಬರ ನಡುವಿನ ಸಂಭಾಷಣೆಯು ನಾಟಕದ ಬಹಳ ಮುಖ್ಯವಾದ ಭಾಗ.

ಯೊಕಾಸ್ತಾಳೊಂದಿಗೆ ಮಾತನಾಡುತ್ತಲೇ ತನ್ನ ಪಾಪಕೃತ್ಯಗಳನ್ನು ಅರಿಯುವ ಬಗೆ ವಿಶಿಷ್ಟವಾಗಿದೆ. ಈಡಿಪಸನ ಈ ಮಾತುಗಳನ್ನು ಗಮನಿಸಿ:

*ಆ ಆಗಂತುಕ ಮತ್ತು ಲಾಯಿಸ್*
*ಇಬ್ಬರೂ– ಒಬ್ಬನೇ ಆಗಿದ್ದರೆ, ನನ್ನಂಥ ನೀಚ ಇನ್ನಾರು?*
*ದೇವರ ಕೋಪ ನನ್ನ ಮೇಲಲ್ಲದೆ ಇನ್ನಾರ ಮೇಲೆ?*
*ಪ್ರಜೆಗಳಾಗಲಿ, ಇನ್ನಾರಾಗಲಿ ನನಗೆ ಹೇಗೆ ಆಶ್ರಯ ಕೊಟ್ಟಾರು?*
*ಎಲ್ಲರೂ ನನ್ನನ್ನು ದೂರಕ್ಕಟ್ಟುತ್ತಾರೆ.*
*ಮತ್ತು ನಾನೇ ನನ್ನ ಮೇಲೆ*
*ಈ ಶಾಪ ಹಾಕಿಕೊಂಡಿದ್ದೇನೆ!*
*ನೋಡು; ನಿನ್ನನ್ನು ನಾನು ಈ ಕೈಗಳಿಂದ ಮುಟ್ಟಿದ್ದೇನೆ,*
*ನಿನ್ನ ಗಂಡನನ್ನು ಕೊಂದ ಕೈಗಳಿಂದ, ಎಂಥ ಸೂತಕ!*
*ಹಾಗಾದರೆ ನಾನು ಪಾಪಿ? ಇರಬೇಕು,*
*ಆದ್ದರಿಂದಲೇ ನಾನು ಥೀಬ್ಸ್ ನಿಂದ ಪಲಾಯನ ಮಾಡಬೇಕು;*
*ನನ್ನ ಜನ, ದೇಶವನ್ನು ಇನ್ನು ನೋಡಕೂಡದು;*
*ನನ್ನ ತಾಯಿಯನ್ನು ಕೂಡುವ*
*ನನ್ನ ತಂದೆ ಪಾಲಿಬಸ್ ನನ್ನು ಕೊಲ್ಲುವ ಅಪಾಯದಿಂದ*
*ಓಡಬೇಕು.*
*ಅಯ್ಯೋ,*
*ನನ್ನನ್ನು ಆ ದೇವರು ಇದಕ್ಕಾಗಿ, ಈ ಕರ್ಮಕ್ಕಾಗಿ ಸೃಷ್ಟಿಸಿದರೆ,*
*ಆತ ಕ್ರೂರಿಯಾದ ಕ್ಷುದ್ರನಲ್ಲದೆ ಮತ್ತೇನು?*
*ಓ,*
*ಸ್ವರ್ಗದ ಭವ್ಯ ಪುಣ್ಯ ಶಕ್ತಿಗಳೇ,*
*ನನ್ನ ಬದುಕಿನಲ್ಲಿ ಆ ದಿನ ಬರದಿರಲಿ! ಬರದಿರಲಿ!*
*ಆ ದುರ್ದಶೆಗೆ ಬದಲಾಗಿ ನಾನು ಮಾನವಕೋಟಿಯಿಂದ*
*ಹೇಳ ಹೆಸರಿಲ್ಲದಂತೆ ಮಾಯವಾಗುವಂತಾಗಲಿ!* [10]

ಯೊಕಾಸ್ತಾ ಗಂಡನಿಗೆ ಸಮಾಧಾನ ಮಾಡುವುದು ಮುಂದುವರಿದೇ ಇದೆ. ಆದರೂ ಆಕೆಯ ಮಾತುಗಳಿಂದ ಈಡಿಪಸ್ ತಳಮಳಕ್ಕೊಳಗಾಗುತ್ತಾನೆ. ಲಾಯಸ್‌ನ ಕೊಲೆಯನ್ನು ಕಣ್ಣಾರೆ ಕಂಡ

ಸೇವಕನನ್ನು ಬರ ಹೇಳುತ್ತಾರೆ. ಅವನು ಕಳ್ಳರು ಕೊಂದರೆಂದರೆ ತಾನು ನಿರಪರಾಧಿ, ಇಲ್ಲವಾದರೆ 'ಪಿತೃಹತ್ಯೆಯ ಪಾಪಿ ನಾನು' ಎಂಬ ಭಯ ಶುರುವಾಗುತ್ತೆ. ಯೊಕಾಸ್ತಾಳಿಗೆ ದೃಢವಿಶ್ವಾಸವಿದೆ. ಈಡಿಪಸ್ ಈ ಆಪಾದನೆಯಿಂದ ಪಾರಾಗುತ್ತಾನೆಂದು. ಅಷ್ಟರೊಳಗೆ ಪಾಲಿಬಸ್ ತೀರಿಕೊಂಡನೆಂದೂ, ಈಡಿಪಸನನ್ನು ಕಾರಿಂಥಿನ ದೊರೆಯನ್ನಾಗಿ ಮಾಡುತ್ತಾರೆಂಬ ಸುದ್ದಿಯನ್ನು ಕೇಳಿ ಯೊಕಾಸ್ತಾಳಿಗೆ ಸಂತೋಷವಾಗುತ್ತದೆ. ಇವರ ಸಂಭಾಷಣೆಯನ್ನು ಕುತೂಹಲದಿಂದ ಕೇಳುತ್ತಿದ್ದ ದೂತ ಈಡಿಪಸ್ ಪಾಲಿಬಸ್‌ನ ಮಗನಲ್ಲ. ತಾನೇ ಅವನನ್ನು ರಕ್ಷಿಸಿ, ಪಾಲಿಬಸ್‌ಗೆ ನೀಡಿದ್ದು ಎನ್ನುತ್ತಾನೆ. ಆಗ ಯೊಕಾಸ್ತಾಳಿಗೆ ಪೈಶಾಚಿಕ ಸತ್ಯದ ಅರಿವಾಗುತ್ತದೆ. ಆ ಹೊತ್ತಿಗೆ ಶಿಶು ಈಡಿಪಸ್ ನನ್ನು ತಂದೆಯ ಅರಮನೆಯಿಂದ ಕೊಂಡೊಯ್ದು ಸೇವಕ ಬರುತ್ತಾನೆ. ಸೇವಕನಿಗೆ ಅಸಹ್ಯ ಸತ್ಯದ ಅರಿವಾಗುತ್ತದೆ. ಉತ್ತರ ಕೊಡದೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ತನ್ನ ಹುಟ್ಟಿನ ಸತ್ಯದ ಹತ್ತಿರ ಬಂದಿದ್ದ ಈಡಿಪಸ್ ಸುಮ್ಮನೆ ಇರಲಾರ. ಉತ್ತರ ಹೇಳದಿದ್ದರೆ ಅವನ ಕೈಗಳನ್ನು ಕಟ್ಟಿ ಹಾಕಿ ಎನ್ನುತ್ತಾನೆ. ಕಾರಿಂಥಿನಿಂದ ಬಂದವನಿಗೆ ಮಗು ಈಡಿಪಸ್ ನನ್ನು ಉಳಿಸಿದವನು ಎಂದು ಹೇಳುವ ಉತ್ಸಾಹ. ಈಡಿಪಸ್ ಸತ್ಯದ ಹತ್ತಿರ ಹತ್ತಿರ ಸಮೀಪಿಸುತ್ತಿದ್ದಾನೆ. ಸತ್ಯ ತಿಳಿದ ಕೂಡಲೇ ಅದನ್ನು ತಡೆಯಲಾರದೆ ಹೀಗೆ ಹೇಳುತ್ತಾನೆ:

***ಹಾ ದೇವರೇ***

***ಅದು ಸತ್ಯ!***

***ಎಲ್ಲ ಭವಿಷ್ಯವಾಣಿಗಳು ಸತ್ಯ!***

***ಈಗ,***

***ಹುಟ್ಟಿನಲ್ಲಿ ಪಾಪಿ ಈಡಿಪಸ್, ಮದುವೆಯಲ್ಲಿ ಪಾಪಿ,***

***ತನ್ನ ಕೈಯಿಂದ ಹರಿಸಿದ ರಕ್ತದಲ್ಲಿ ಕೂಡ ಪಾಪಿ ಈತ;***

***ಓ ಬೆಳಕೆ, ಎಲ್ಲ ಬಯಲಾದ ಬದುಕುಳ್ಳ ನನ್ನನ್ನ ಮುಚ್ಚು,***

***ನಾನು ಮತ್ತೆ, ನಿನ್ನನ್ನು ನೋಡದಂತಾಗಲಿ!*** [11]

ಎಂದು ಮಾತನಾಡುತ್ತಿದ್ದಂತೆ ಈಡಿಪಸ್ ನ ಕಾಲುಗಳು ನಡುಗುತ್ತಿವೆ. ಕೂಡಲೇ ಅರಮನೆ ಒಳಗೆ ತೆರಳುತ್ತಾನೆ. ಮೇಳದವರು 'ಮನುಷ್ಯ ದೇವರ ಎದುರು ತೃಣ ಸಮಾನ' ಎಂದು ಹಾಡುತ್ತಿದ್ದಾರೆ. ದೂತನೊಬ್ಬ ಯೊಕಾಸ್ತ ನೇಣು ಹಾಕಿಕೊಂಡಳೆಂದೂ, ಈಡಿಪಸ್ ತನ್ನ ಕಣ್ಣುಗಳನ್ನು ಬಂಗಾರದ ಪದಕದ ಕೊಂಡಿಯಿಂದ ತಿವಿದುಕೊಂಡು ಕುರುಡನಾದನೆಂದೂ ಸುದ್ದಿ ತರುತ್ತಾರೆ. ಅಷ್ಟರಲ್ಲಿ ಕುರುಡ ಈಡಿಪಸ್ ಪ್ರವೇಶಿಸುತ್ತಾನೆ. ನೂತನ ದೊರೆ ಕ್ರೆಯಾನ್ ಕೂಡಾ ಪ್ರವೇಶಿಸುತ್ತಾನೆ.

ಪಾಪದ ಮೈಲಿಗೆಯಾದ ನಾನು ರಾಜ್ಯದಲ್ಲಿ ಇರಲಾಗದು. ಯಾರೂ ಕಾಣದೆಡೆ ಹೋಗಬೇಕೆಂದು ಈಡಿಪಸ್ ಬಯಸುತ್ತಾನೆ. ಯೊಕಾಸ್ತಾಳ ದೇಹಕ್ಕೆ ಉಚಿತ ಸಂಸ್ಕಾರಮಾಡು ಎಂದು ಪ್ರಾರ್ಥಿಸುತ್ತಾನೆ. ಕೊನೆಗೆ ನನ್ನಿಬ್ಬರು ಹೆಣ್ಣುಮಕ್ಕಳ ಮೈದಡವಿ ಅಲ್ಲಿಂದ ಈಡಿಪಸ್ ಹೊರಡುತ್ತಾನೆ. ನಾಟಕದ ಕೊನೆಯಲ್ಲಿನ ಮೇಳದವರ ಮಾತುಗಳು ಅರ್ಥಪೂರ್ಣವಾಗಿವೆ:

*ಥೀಬ್ಸ್ ಜನರೆ, ಈಡಿಪಸ್ ನನ್ನು ನೋಡಿ:*

*ಈತನೊಮ್ಮೆ ವಿಖ್ಯಾತ ಸ್ಫಿಂಕ್ಸ್ ಒಡಪ ಉತ್ತರಿಸಿ*

*ಅಭ್ಯದಯಗೊಂಡ. ಜಗದ ಎಲ್ಲರಿಗಿಂತ ಶಕ್ತನಾದ;*

*ಮನುಷ್ಯಕುಲ ಅವನ ವೈಭವಕ್ಕೆ ಅಸೂಯೆಪಟ್ಟಿತು.*

*ಕೊನೆಯಲ್ಲಿ ಎಲ್ಲವೂ ಮುರಿದುಬಿತ್ತು.*

*ಪ್ರತಿಯೊಬ್ಬ ಮಾನವನೂ ತನ್ನ ಸಾಮಾನ್ಯತೆಗೆ ತಕ್ಕಂತೆ*

*ಇದನ್ನು ಚಿಂತಿಸಲಿ: ಸಾಯುವ ವೇಳೆ*

*ತನ್ನ ಬದುಕೊಂದು ನೋವಿಲ್ಲದ ನೆನಪೆನ್ನಿಸುವ ತನಕ*

*ತನ್ನ ಅದೃಷ್ಟದ ಬಗ್ಗೆ ಹೆಮ್ಮೆಪಡದಿರಲಿ.*[12]

ಸೊಫೋಕ್ಲಿಸನ ನಾಟಕಗಳ ಮುಖ್ಯ ಗುಣ ಬದುಕಿನ ಕ್ಲಿಷ್ಟತೆಯನ್ನು ಸ್ಪಷ್ಟಗೊಳಿಸುವುದು. ದುಷ್ಟ–ಶಿಕ್ಷೆ; ಶಿಷ್ಟ–ರಕ್ಷೆಯ ನ್ಯಾಯವನ್ನು ಮೀರಿದ ತರ್ಕಾತೀತ ಶಕ್ತಿಯನ್ನು ನಾಟಕ ಕೃತಿಯೊಳಗೆ ತರುವ ಮೂಲಕ ಸೊಫೋಕ್ಲಿಸ್ ಎಲ್ಲಾ ಕಾಲಕ್ಕೂ ಪ್ರಸ್ತುತವೆನ್ನಬಹುದಾದ ಪಾತ್ರಗಳನ್ನು ನಿರ್ಮಿಸಿದ್ದಾನೆ. ದುರಂತ ನಾಟಕಗಳ ಕಥಾನಾಯಕ ಉದಾತ್ತನು, ಗುಣಸಂಪನ್ನನಾಗಿದ್ದರೂ ತನ್ನೊಳಗಿನ ಒಂದು ದುರಂತ ತಪ್ಪಿನಿಂದ ವೇದನೆಯನ್ನು ಅನುಭವಿಸುತ್ತಾನೆ. ದುರಂತ ಅಂತ್ಯ ತಂದುಕೊಳ್ಳುವುದು ಸಾಮಾನ್ಯವಾಗಿ ಎಲ್ಲ ದುರಂತ ನಾಟಕಗಳಿಗೂ ಅನ್ವಯಿಸುವಂತಹದ್ದು. ದೊರೆ ಈಡಿಪಸ್ ನಾಟಕ ವಿಧಿಯ ಬಲೆಯಲ್ಲಿ ಸಿಕ್ಕ ಮನುಷ್ಯ ಅದರ ಆಟವನ್ನು ನಡೆಸಿಕೊಡುತ್ತಲೇ ಮಾನವತೆಯನ್ನು ಉಜ್ವಲಗೊಳಿಸಿ ತೋರುವ ಮೂಲಕ ವಿಧಿಯನ್ನು ಗೆಲ್ಲುವ ಚಿತ್ರಣ ಕೊಟ್ಟಿದೆ.

ವಸ್ತುನಿರ್ವಹಣೆ, ಕಾಲ, ಸ್ಥಳ ಮತ್ತು ಕ್ರಿಯೆಗಳ ಐಕ್ಯತೆ, ಪಾತ್ರ ಚಿತ್ರಣದ ದೃಷ್ಟಿಯಿಂದಲೂ ನಾಟಕ ಯಶಸ್ವಿಯಾಗಿದೆ. ಲಾಯಸ್‌ನ ಕೊಲೆ ಮತ್ತು ಈಡಿಪಸನ ಹುಟ್ಟು ಈ ಎರಡು ಕತೆಗಳನ್ನು ಒಟ್ಟಿಗೆ ಸೇರಿಸಿ ಒಂದು ಕತೆಯಿಂದ ಮತ್ತೊಂದು ಕತೆಗೆ ಓದುಗ ಅಥವಾ ಪ್ರೇಕ್ಷಕರ ಅರಿವಿಗೆ ಬಾರದಂತೆ ನಿರ್ವಹಿಸಿರುವ ಕ್ರಮ ಅದ್ಭುತವಾಗಿದೆ. ಕತೆ ವರ್ತಮಾನದಲ್ಲಿ ಪ್ರಾರಂಭವಾಗಿ ಭೂತಕ್ಕೆ ಪ್ರವೇಶಿಸಿ ಮತ್ತು ವರ್ತಮಾನ–ಭೂತ ಮತ್ತು ಭವಿಷ್ಯಗಳ ನಡುವೆ ಉಯ್ಯಾಲೆಯಾಡುವ ನಾಟಕ ಅರ್ಥಪೂರ್ಣ ದರ್ಶನವನ್ನು ನೀಡುತ್ತದೆ.

**ಉಪಸಂಹಾರ**

'ದೊರೆ ಈಡಿಪಸ್' ನಾಟಕ ಮನುಷ್ಯ ಶೋಧನೆಯ ವಿಜಯದ ಕತೆಯನ್ನು ದುರಂತದೊಂದಿಗೆ ನಿರೂಪಿಸುತ್ತದೆ. ಈಡಿಪಸ್ ಪಾತ್ರ ಸಾರ್ವಕಾಲಿಕ ಸಂಕೇತ. ಸತ್ಯ ಶೋಧನೆಗಾಗಿ, ತನ್ನ ಹುಟ್ಟಿನ ಮೂಲ ಹುಡುಕಾಟಕ್ಕಾಗಿ ರಾಜಪಟ್ಟವನ್ನೂ ಬಿಟ್ಟುಕೊಡಬಲ್ಲ ತ್ಯಾಗಿಯೂ ಹೌದು. ಅಪಾರ ಬಂಧು ಬಳಗವನ್ನು, ತನ್ನೆರಡು ಕಣ್ಣುಗಳನ್ನು ಕಳೆದುಕೊಂಡು ಯಾರಿಗೂ ಕಾಣದ ಪ್ರದೇಶಕ್ಕೆ ಹೊರಟು ನಿಲ್ಲುತ್ತಾನೆ. ಯಾರಿಂದಲೂ ಗೆಲ್ಲಲಾರದ್ದನ್ನು ಗೆದ್ದವನು ಈಡಿಪಸ್. ಯಾರೂ ಊಹಿಸಲಾರದ ಪ್ರಪಾತಕ್ಕಿಳಿದವನೂ ಈತನೇ ಎಂಬುದು ದಿಟ. ಮನುಷ್ಯ ಶ್ರೇಷ್ಠ– ದೇವತಾಶಕ್ತಿಗಳು ಒಂದಾದ ಮೇಲೆ ಒಂದರಂತೆ ಮೇಲಾಗಿ

ಕೊನೆಯಲ್ಲಿ ದೈವಶಕ್ತಿಯೆದುರು ಮನುಷ್ಯ ತೃಣ ಸಮಾನ ಎಂಬುದನ್ನು ನಮ್ಮ ಅರಿವಿಗೆ ತರುತ್ತದೆ. **"**ಈಡಿಪಸನೊಬ್ಬನ ಸ್ವಭಾವ ತಂದ ದುರಂತವಲ್ಲ; ಅವನ ಶೀಘ್ರಕೋಪ, ಒರಟುತನ, ಹಠಮಾರಿತನ ಇವಿಲ್ಲದಿದ್ದರೆ ತಪ್ಪಿಸಬಹುದಾಗಿದ್ದ ದುರಂತವಲ್ಲ; ಮಾನವನ ಪರಿಸ್ಥಿತಿಯಲ್ಲೆ ಈ ದುರಂತದ ಬೀಜ ಅಡಗಿದೆ. ಇದು ಮಾನವನ ದುರಂತ. ಆದರೆ ಈ ದುರಂತದ ಚೌಕಟ್ಟಿನಲ್ಲೆ ಈಡಿಪಸನ –ಮರ್ತ್ಯರಲ್ಲಿ ಅತಿ ಶ್ರೇಷ್ಠ'ನ – ಹಿರಿಮೆಯೂ ರೂಪ ತಾಳುತ್ತದೆ**"** [13]

**ಕೊನೆ ಟಿಪ್ಪಣಿಗಳು**

1. ಲಂಕೇಶ್ ಪಿ. (1972). ದೊರೆ ಈಡಿಪಸ್ ಮತ್ತು ಅಂತಿಗೊನೆ, ಅಕ್ಷರ ಪ್ರಕಾಶನ, ಸಾಗರ. ಪುಟ. ಮುನ್ನುಡಿ–12
2. ಅದೇ ಪುಟ.6
3. ಅದೇ ಪುಟ.8
4. ಅದೇ ಪುಟ.9
5. ಅದೇ ಪುಟ.13
6. ಅದೇ ಪುಟ.14
7. ಅದೇ ಪುಟ.15
8. ಅದೇ ಪುಟ.16
9. ಅದೇ ಪುಟ.19–20
10. ಅದೇ ಪುಟ.33–34
11. ಅದೇ ಪುಟ.48
12. ಅದೇ ಪುಟ.60
13. ಶೇಷಗಿರಿರಾವ್ ಎಲ್.ಎಸ್. (2010). ಸಮಗ್ರ ವಿಮರ್ಶಾ ಸಾಹಿತ್ಯ ಸಂಪುಟ–6 ಪುಟ.528

**ಆಕರ ಗ್ರಂಥ**


- ಲಂಕೇಶ್ ಪಿ. (1972). ದೊರೆ ಈಡಿಪಸ್ ಮತ್ತು ಅಂತಿಗೊನೆ. ಅಕ್ಷರ ಪ್ರಕಾಶನ, ಸಾಗರ


**ಪರಾಮರ್ಶನ ಗ್ರಂಥಗಳು**


- ಪ್ರಸಾದಸ್ವಾಮಿ ಎಸ್. (2010). ಲಂಕೇಶರ ನಾಟಕಗಳು.  ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಮರುಳಸಿದ್ದಪ್ಪ ಕೆ. (2013). ಆಧುನಿಕ ಕನ್ನಡ ನಾಟಕ (ಪರಿಷ್ಕೃತ, ವಿಸ್ತೃತ ಆವೃತ್ತಿ). ಅಂಕಿತ ಪುಸ್ತಕ, ಬೆಂಗಳೂರು
- ಮರುಳಸಿದ್ದಪ್ಪ ಕೆ. (2019). ಲಂಕೇಶ್ ಬದುಕು ಬರೆಹ. ಸಪ್ನ ಬುಕ್ ಹೌಸ್, ಬೆಂಗಳೂರು
- ಶೇಷಗಿರಿರಾವ್ ಎಲ್.ಎಸ್. (2010). ಸಮಗ್ರ ವಿಮರ್ಶಾಸಾಹಿತ್ಯ ಸಂಪುಟ–6. ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
- ಹಾಲತಿ ಸೋಮಶೇಖರ್. (2006). ಪಿ.ಲಂಕೇಶ್. ನವಕರ್ನಾಟಕ ಪ್ರಕಾಶನ, ಬೆಂಗಳೂರು.